# ಪ್ರಾರ್ಥನೆ

## ಶ್ರೀರಾಮಕೃಷ್ಣಪ್ರಶಸ್ತಿಃ

**ಕ್ಷೀಣಾಃ ಸ್ಮ ದೀನಾಃ ಸಕರುಣಾ ಜಲ್ಪಂತಿ ಮೂಢಾ ಜನಾಃ**
**ನಾಸ್ತಿಕ್ಯಂತ್ವಿದಂತು ಅಹಹ ದೇಹಾತ್ಮವಾದಾತುರಾಃ ।**
**ಪ್ರಾಪ್ತಾಃ ಸ್ಮ ವೀರಾ ಗತಭಯಾ ಅಭಯಂ ಪ್ರತಿಷ್ಠಾಂ ಯದಾ**
**ಆಸ್ತಿಕ್ಯಂತ್ವಿದಂತು ಚಿನುಮಃ ರಾಮಕೃಷ್ಣದಾಸಾ ವಯಮ್ ॥ ೧ ॥**

ಮೂಢರು ದೇಹವೇ ತಾವೆಂದು ಭ್ರಮಿಸಿ, ದುರ್ಬಲರು ನಾವು, ದೀನರು ನಾವು ಎಂದು ಅಳುವರು. ಇದೆಲ್ಲ ನಾಸ್ತಿಕತೆ. ಭಯದಾಚೆ ಇರುವ ಗತಿಯನ್ನು ನಾವು ಹೊಂದಿರುವೆವು. ಇನ್ನು ಮೇಲೆ ಯಾವ ಭಯವೂ ಇಲ್ಲ. ಧೀರರಾಗೋಣ. ಶ್ರೀರಾಮಕೃಷ್ಣರ ದಾಸರಾದ ನಾವು ಸ್ವೀಕರಿಸುವ ಆಸ್ತಿಕತನವಿದು.

**ಪೀತ್ವಾ ಪೀತ್ವಾ ಪರಮಮಮೃತಂ ವೀತಸಂಸಾರರಾಗಾಃ**
**ಹಿತ್ವಾ ಹಿತ್ವಾ ಸಕಲಕಲಹಪ್ರಾಪಿಣೀಂ ಸ್ವಾರ್ಥಸಿದ್ಧಿಮ್ ।**
**ಧ್ಯಾತ್ವಾ ಧ್ಯಾತ್ವಾ ಗುರುವರಪದಂ ಸರ್ವಕಲ್ಯಾಣರೂಪಮ್**
**ನತ್ವಾ ನತ್ವಾ ಸಕಲಭುವನಂ ಪಾತುಮಾಮಂತ್ರಯಾಮಃ ॥ ೨ ॥**

ಸಂಸಾರದ ಮೇಲಿನ ಆಸೆಯಲ್ಲವನ್ನೂ ತೊರೆದು ಅನವರತವೂ ಅಮರತ್ವದ ಆನಂದವನ್ನು ಪಾನ ಮಾಡುತ್ತ, ಮೋಹಕ್ಕೆ ಮೂಲವಾದ ಸ್ವಾರ್ಥಪರತೆಯನ್ನು ತೊರೆದು, ಸರ್ವಕಲ್ಯಾಣರೂಪನಾದ ಗುರುದೇವನ ಪಾದಕಮಲಗಳನ್ನು ಧ್ಯಾನಿಸುತ್ತ, ಅನಂತ ವಂದನೆಗಳನ್ನು ಮಾಡಿ, ಜಗತ್ತೆಲ್ಲವನ್ನೂ ಈ ಅಮೃತಪಾನದಲ್ಲಿ ಭಾಗಿಗಳಾಗಿ ಎಂದು ಬೇಡುತ್ತೇವೆ.

**ಪ್ರಾಪ್ತಂ ಯದ್ವೈ ತ್ವನಾದಿನಿಧನಂ ವೇದೋದಧಿಂ ಮಥಿತ್ವಾ**
**ದತ್ತಂ ಯಸ್ಯ ಪ್ರಕರಣೇ ಹರಿಹರಬ್ರಹ್ಮಾದಿದೇವೈರ್ಬಲಮ್ ।**
**ಪೂರ್ಣಂ ಯತ್ತು ಪ್ರಾಣಸಾರೈರ್ಭೌಮನಾರಾಯಣಾನಾಮ್**
**ರಾಮಕೃಷ್ಣಸ್ತನುಂ ಧತ್ತೇ ತತ್ಪೂರ್ಣಪಾತ್ರಮಿದಂ ಭೋಃ ॥ ೩ ॥**

ಈ ಅಮೃತವು ಅನಂತ ವೇದರಾಶಿಯ ಮಂಥನದಿಂದ ಉದ್ಭವಿಸಿತು. ಇದಕ್ಕೆ ಬ್ರಹ್ಮ ವಿಷ್ಣು ಮಹೇಶ್ವರಾದಿ ದೇವತೆಗಳೆಲ್ಲರೂ ತಮ್ಮ ಸರ್ವವನ್ನೂ ಧಾರೆಯೆರೆದಿರುವರು. ಮಹಾ ಅವತಾರಗಳ ತಪೋಶಕ್ತಿಯಿಂದ ಇದು ಪೋಷಿತವಾಗಿರುವುದು. ಶ್ರೀರಾಮಕೃಷ್ಣರು ಇಂತಹ ಅಮೃತವನ್ನು ಕಲಶದಲ್ಲಿ ತುಂಬಿ ದಾನ ಮಾಡುವುದಕ್ಕೆ ನಿಂತಿರುವರು.

— ಸ್ವಾಮಿ ವಿವೇಕಾನಂದ